ಉ) ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?

ಕೆಶಿಪ್–2 ಯೋಜನೆಯಲ್ಲಿ ಒಟ್ಟು 3411 ಕಿಮೀ.ಗಳ ರಾಜ್ಯ ಹೆದ್ದಾರಿ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಮೊದಲ ಹಂತದಲ್ಲಿ 584 ಕಿಮೀ. ರಸ್ತೆ ಅಭಿವೃದ್ಧಿಗೆ ವಿಶ್ವಬ್ಯಾಂಕ್ ನೆರವು ಪಡೆದುಕೊಳ್ಳಲು ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ. ಎರಡನೇ ಹಂತದ 863 ಕಿಮೀ.ಗಳ ರಸ್ತೆ ಅಭಿವೃದ್ಧಿಗೆ ಏಷ್ಯ ಅಭಿವೃದ್ಧಿ ಬ್ಯಾಂಕ್‌ನಿಂದ ನೆರವು ಪಡೆದುಕೊಳ್ಳಲು ರಾಜ್ಯ ಸರ್ಕಾರದ ಅನುಮೋದನೆ ದೊರೆತಿದೆ. ಇನ್ನುಳಿದಂತೆ 1964 ಕಿಮೀ.ಗಳ ರಸ್ತೆ ಅಭಿವೃದ್ಧಿಗೆ ಇತರೆ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆದುಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಸದರಿ ಸಂಸ್ಥೆಗಳಿಂದ ಆರ್ಥಿಕ ನೆರವು ಒದಗಿ ಬಂದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (444)261
ಮಾನ್ಯ ಸದಸ್ಯರ ಹೆಸರು : ಶ್ರೀ. ಸಿದ್ದು ಸವದಿ (ತೇರದಾಳ್)
ಉತ್ತರಿಸುವ ಸಚಿವರು : (ಶ್ರೀ.ಸಿ.ಎಂ.ಉದಾಸಿ)
: ಮಾನ್ಯ ಲೋಕೋಪಯೋಗಿ ಸಚಿವರು

ಅ) ಜಮಖಂಡಿ–ತೇರದಾಳ–ಕುಡಚಿ ರಸ್ತೆಯು ಜಮಖಂಡಿ ತಾಲ್ಲೂಕಿನ ಮತ್ತು ಬಾಗಲಕೋಟೆ ಜಿಲ್ಲೆಯ ಪ್ರಮುಖ ರಾಜ್ಯ ಹೆದ್ದಾರಿಯನ್ನು 2008–09ನೇ ಕೆಶಿಪ್ ಯೋಜನೆಯಲ್ಲಿ ತೆಗೆದುಕೊಳ್ಳಲಾಗುವುದೇ;

ಜಮಖಂಡಿಯಿಂದ ಆಸಂಗಿ–ತೇರದಾಳ–ಕುಡಚಿ–ಮಂಗಸೂಳಿ–ಮಹಾರಾಷ್ಟ್ರ ಗಡಿವರೆಗಿನ 78.5 ಕಿಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ಉನ್ನತೀಕರಿಸುವ ಕಾಮಗಾರಿಯನ್ನು ಕೆಶಿಪ್–II ಯೋಜನೆಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಹಣಕಾಸು ಸಂಸ್ಥೆಗಳಿಂದ ಸೂಕ್ತ ಆರ್ಥಿಕ ನೆರವು ಒದಗಿ ಬಂದ ನಂತರ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಆ) 2008–09ರಲ್ಲಿ ಈ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲಿರುವ ರಾಜ್ಯ ರಸ್ತೆಗಳು ಯಾವುವು (ಸಂಪೂರ್ಣ ವಿವರ ಒದಗಿಸುವುದು);

2008–09 ರಲ್ಲಿ ಕೆಶಿಪ್–II ಯೋಜನೆಯ ಹಂತ–1 ರಲ್ಲಿ 584 ಕಿಮೀ.ಗಳ ರಾಜ್ಯ ಹೆದ್ದಾರಿಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ರಸ್ತೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೆಶಿಪ್ ರಸ್ತೆಗಳ ಅಭಿವೃದ್ಧಿ ಯೋಜನೆಯಲ್ಲಿ ತಾರತಮ್ಯವೆಸಗಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿರುವುದು ನಿಜವೇ?

ಕೆಶಿಪ್ ರಸ್ತೆಗಳ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಬಹುದಾದ ರಸ್ತೆಗಳ ಕಾರ್ಯತಂತ್ರ ಆಯ್ಕೆ ಅಧ್ಯಯನ (Strategic Option Study) ಮತ್ತು

ಕಾರ್ಯಸಾಧ್ಯತೆ ಅಧ್ಯಯನ (Feasibility Study) ನಡೆಸಿ ರಸ್ತೆಗಳ ಅಂತಿಮ ಆಯ್ಕೆ ಮಾಡಲಾಗುತ್ತಿರುವುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆಶಿಫ್– II ಯೋಜನೆಯ ಹಂತ–1 ರಲ್ಲಿ ವಿಶ್ವಬ್ಯಾಂಕ್ ನೆರವಿಒಂದಿಗೆ 2008–09 ರಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ರಸ್ತೆಗಳ ವಿವರ

ಅನುಬಂಧ

ಕ್ರಮ ಸಂಖ್ಯೆ.	ರಸ್ತೆಯ ಹೆಸರು	ಅಭಿವೃದ್ಧಿಯ ವಿಧ	ರಸ್ತೆಯ ಉದ್ದ (ಕಿಮೀ.ಗಳಲ್ಲಿ)
1.	ಗಂಗಾವತಿ–ಕಂಪ್ಲಿ–ಕುಡಿತಿನಿ	ಉನ್ನತೀಕರಿಸುವುದು	41.0
2.	ಧಾರವಾಡ–ಸೌದತ್ತಿ		38.6
3.	ಹಾವೇರಿ (ಎನ್.ಹೆಚ್.4)–ಹಾನಗಲ್		31.9
4.	ಬಾಗೇವಾಡಿ(ಎನ್.ಹೆಚ್.4)–ಬೈಲಹೊಂಗಲ		23.8
5.	ಚೌಡಾಪುರಗುಲ್ಬರ್ಗ		32.7
6.	ಮುಂಡರಗಿ–ಹಡಗಲಿ		24.0
7.	ಹಡಗಲಿ–ಹರಪ್ಪನಹಳ್ಳಿ		27.7
8.	ಕೌಡ್ಲಿ–ಮಂಡ್ಯ		33.8
9.	ಹೊಸಕೋಟೆ–ಹೆಚ್(ಇಂಡಗನಾಲ) ಕ್ರಾಸ್		23.9
10.	ಹೆಚ್.ಕ್ರಾಸ್–ಚಿಂತಾಮಣಿ ಬೈಪಾಸ್ (cor 65 F.jn)		24.7
11.	ಬಂಟವಾಳ (ಎನ್.ಹೆಚ್.48)–ಬೆಳ್ತಂಗಡಿ		35.4
12.	ಮಳವಳ್ಳಿ–ಮದ್ದೂರು		23.2
13.	ಮದ್ದೂರು–ಹುಲಿಯಾರುದುರ್ಗ		25.6
14.	ಹುಲಿಯಾರುದುರ್ಗ–ಕುಣಿಗಲ್		23.1
15.	ಕುಣಿಗಲ್–ತುಮಕೂರು		38.2
16.	ತುಮಕೂರು–ಕೊರಟಗೆರೆ		25.1
17.	ಹಾಸನ–ಅರಕಲಗೂಡು		31.1
18.	ಕೊರಟಗೆರೆ–ಮಧುಗಿರಿ		17.9

19.	ಮಧುಗಿರಿ–ಪಾವಗಡ		38.9
20.	ಚಿಕ್ಕೋಡಿ–(ಎನ್.ಹೆಚ್.4 ಕ್ರಾಸ್ ನಿಪ್ಪಾಣಿ		23.9

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (445)262
ಮಾನ್ಯ ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ
ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)
: ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ತೇರದಾಳ ಮತ ಕ್ಷೇತ್ರದಲ್ಲಿ ಅಲ್ಲಮ ಪ್ರಭು ದೇವಸ್ಥಾನ–ತೇರದಾಳ ವೆಂಕಟರಮಣ ದೇವಸ್ಥಾನ ಕಲ್ಲಳ್ಳಿ, ಮಹಾಲಿಂಗೇಶ್ವರ ದೇವಸ್ಥಾನ ಮಹಾಲಿಂಗಪೂರ, ಈ ರೀತಿ ಮೂರು ಐತಿಹಾಸಿಕ ಮತ್ತು ಪುರಾತನ ದೇವಸ್ಥಾನಗಳಿದ್ದು, ವರ್ಷವಿಡೀ ಬರುವ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದೇ;

ತೇರದಾಳದಲ್ಲಿರುವ ಪ್ರವಾಸಿ ಆಕರ್ಷಣೆಗಳಾದ ಪುರಾತನ ದೇವಾಲಯಗಳ ಬಳಿ ಮೂಲಭೂತ ಸೌಲಭ್ಯ ಒದಗಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ. ಇಲ್ಲಿ ಒಂದು ವಸತಿ ಸೌಕರ್ಯ ನಿರ್ಮಿಸಲು ರೂ.20 ಲಕ್ಷಗಳು ಮಂಜೂರಾಗಿದ್ದು ಇದನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲಾಗುತ್ತಿದೆ.

ಆ) 2007–08ರಲ್ಲಿ ತೇರದಾಳ ಅಲ್ಲಮಪ್ರಭು ದೇವರ ದೇವಸ್ಥಾನದ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ರೂ.35.00ಲಕ್ಷ ರೂಪಾಯಿಯ ಕ್ರಿಯಾ ಯೋಜನೆ ತಯಾರಿಸಿ ಯೋಜನೆಯನ್ನು ಕೈಬಿಡಲು ಕಾರಣಗಳೇನು;

2007–08ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಬಗ್ಗೆ ಪ್ರಸ್ತಾಪ ಇರಲಿಲ್ಲ.

ಇ) 2005 ರಿಂದ ಇಲ್ಲಿಯವರೆಗೆ ಇಲಾಖೆಯಿಂದ ಬಾಗಲಕೋಟೆ ಜಿಲ್ಲೆಯ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಖರ್ಚಾದ ಹಣವೆಷ್ಟು(ಸಂಪೂರ್ಣ ವಿವರ ಒದಗಿಸುವುದು)?

ಬಾಗಲಕೋಟೆ ಜಿಲ್ಲೆಯ ಈ ಕೆಳಕಂಡ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲು 2005 ರಿಂದ ಈವರೆಗೆ ವೆಚ್ಚ ಮಾಡಿದ ವಿವರಗಳು ಹೀಗಿವೆ.

1. ಬಾದಾಮಿಯ ಹೋಟೆಲ್ ಮಯೂರ ಚಾಲುಕ್ಯ ಉನ್ನತೀಕರಣ – ರೂ.68.06ಲಕ್ಷಗಳು
2. ಅಗಸ್ತ್ಯ ತೀರ್ಥದ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ರೂ.30.34ಲಕ್ಷಗಳು